**<u>4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು</u>**

**ಸಿಸಿ ನಂ. 6532/2016 ಚಾಸಾಃ 14 ಪ್ರಾಸಾಃ6**

ಸಾಕ್ಷಿದಾರರ ಹೆಸರು : ಮೋಹನ್ ಡಿ ಪಟೇಲ್
ತಂದೆಯ ಹೆಸರು : ದೊಡ್ಡೇಗೌಡ
ವಯಸ್ಸು : 43 ವರ್ಷ
ವೃತ್ತಿ : ಪಿ.ಐ.
ವಾಸ : ಚಂದ್ರಲೇಔಟ್, ಬೆಂಗಳೂರು

**<u>ಸಾಕ್ಷಿಯನ್ನು ದಿಃ 25.09.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯವಿಚಾರಣೆ: ಪ್ರಾಜ್ಞಾ ಹಿ.ಸ.ಸ.ಅ ರವರಿಂದಃ-</u>**

ನಾನು ಡಿಸೆಂಬರ್-2012 ರಿಂದ ಮೇ-2016 ರವರೆಗೆ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ10.09.2014 ರಂದು ಮಧ್ಯಾಹ್ನ 3.00 ಗಂಟೆಗೆ ಚಾಸಾ-1 ರವರು ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಅಪರಾದ ಕ್ರಮಾಂಕ 203/2014 ರಲ್ಲಿ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗೆ ಸಲ್ಲಿಸಿರುತ್ತೇನೆ. ದೂರಿನಲ್ಲಿ ನನ್ನ ಸಹಿಯನ್ನು ಗುರ್ತಿಸುತ್ತೇನೆ. ದೂರನ್ನು ಈಗಾಗಲೇ ನಿಪಿ-1 ಎಂದು ಗುರ್ತಿಸಲಾಗಿದೆ. ದೂರಿನಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1ಬಿ ಎಂದು ಗುರ್ತಿಸಲಾಯಿತು. ಪ್ರ.ವ.ವರದಿಯನ್ನು ನೋಡಿ ಗುರ್ತಿಸುತ್ತೇನೆ. ಪ್ರ.ವ.ವರದಿಯನ್ನು ನಿಪಿ-4 ಎಂದು ಗುರ್ತಿಸಲಾಯಿತು. ನಿಪಿ-4 ರಲ್ಲಿರುವ ನನ್ನ ಸಹಿಯನ್ನು ಗುರ್ತಿಸುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ-4ಎ ಎಂದು ಗುರ್ತಿಸುತ್ತೇನೆ.

ಅದೇ ದಿನ ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಚಾಸಾ-1 ರವರು ತೋರಿಸಿಕೊಟ್ಟ ಕೃತ್ಯ ಸ್ಥಳದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಸಂಜೆ 4.00 ರಿಂದ 5.00 ಗಂಟೆಯ ಸಮಯದಲ್ಲಿ ಮಹಜರು ಕ್ರಮವನ್ನು ಜರುಗಿಸಿರುತ್ತೇನೆ.

ದಿಃ10.09.2014 ರ ಮಹಜರನ್ನು ಗುರ್ತಿಸುತ್ತೇನೆ. ಅದನ್ನು ಈಗಾಗಲೇ ನಿಪಿ-2 ಎಂದು ಗುರ್ತಿಸಲಾಗಿದೆ. ನಿಪಿ-2 ರಲ್ಲಿರುವ ನನ್ನ ಸಹಿಯನ್ನು ನೋಡಿ ಗುರ್ತಿಸುತ್ತೇನೆ. ಆ ಸಹಿಯನ್ನು ನಿಪಿ-2ಡಿ ಎಂದು ಗುರ್ತಿಸಲಾಯಿತು. ದಿಃ15.09.2014 ರಂದು ಚಾಸಾ-1 ರವರು ಹಾಜರುಪಡಿಸಿದ ಆಡಿಟ್ ವರದಿಯ ನಕಲು ಪ್ರತಿ ಮತ್ತು ಆಸ್ಪತ್ರೆ ಆಡಳಿತ ಮಂಡಳಿ ಹಾಜರುಪಡಿಸಿದ ಆರೋಪಿಯ ಅಪಾಯಿಂಟ್‌ಮೆಂಟ್ ಲೆಟರ್, ಎಜುಕೇಷನ್ ಪ್ರಮಾಣ ಪತ್ರ ಹಾಗೂ ಸೃಷ್ಟಿಸಿದ ನಕಲಿ ಇನ್‌ವಾಯ್ಸ್ ವೋಚರ್ ಗಳನ್ನು ಅಮಾನತ್ತುಪಡಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಆಡಿಟ್ ವರದಿಯನ್ನು ಗುರ್ತಿಸುತ್ತೇನೆ. ಅದನ್ನು ನಿಪಿ-5 ಎಂದು ಗುರ್ತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಸಾಕ್ಷಿಯ ಕೋರಿಕೆಯ ಮೇರೆಗೆ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**